ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶುಕ್ರವಾರ ೨೩ನೇ ಫೆಬ್ರವರಿ ೧೯೯೬, ಮಾಘ, ಶಕ ೧೭ರಂದು ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೯.೫೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಶ್ನೋತ್ತರಗಳು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ಶ್ರೀ ಎಸ್. ಅಂಗಾರ ಅವರ ಪ್ರಶ್ನೆ ಸಂಖ್ಯೆ 47ಕ್ಕೆ ಸಚಿವರು ಟೈಂ ಕೇಳಿದ್ದಾರೆ.

ಶ್ರೀ ಕೆ.ಎಸ್. ಬೀಳಗಿ : ಅಧ್ಯಕ್ಷರೇ ರೆಕಾರ್ಡ್ಸ್ ನೋಡಬೇಕಾಗಿದೆ. ಸುಳ್ಯಕ್ಕೊಂಡು ಬಸ್ ನಿಲ್ದಾಣ ಕಟ್ಟಲು ಸಮಸ್ಯೆ ಇಲ್ಲ. ಅಲ್ಲಿ 24 ಗಂಟೆಗೆ ಅಕ್ವಿಜಿಶನ್ ಎಂದು ಹಾಕಿದ್ದರು. ಅದರ ಮಾಲಿಕ ಹೈಕೋರ್ಟ್‌ಗೆ ಹೋಗಿ ತಡೆ ತಂದಿದ್ದಾನೆ.

ಅಧ್ಯಕ್ಷರು : ಅದನ್ನೇ ಉತ್ತರ ಕೊಡಿ, ಅದಕ್ಕೆ ಟೈಂ ಏಕೆ ಬೇಕು?

ಶ್ರೀ ಕೆ.ಎಸ್. ಬೀಳಗಿ : ಅಲ್ಲದೆ ಆ ಜಾಗ ಸಾಲುವುದಿಲ್ಲವೆಂದು ಡಿಸಿಯವರಿಗೆ ಬೇರೆ ಲ್ಯಾಂಡ್ ಪ್ರಪೋಜ್ ಮಾಡಿ ಎಂದು ಹೇಳಿದ್ದೇವೆ. ಮಾನ್ಯ ಸದಸ್ಯರು ಅಲ್ಲಿ ಸಹಾಯ ಮಾಡಿದರೆ ಬಸ್‌ಸ್ಟ್ಯಾಂಡ್ ಕಟ್ಟಲಿಕ್ಕೆ ತೊಂದರೆ ಇಲ್ಲ.

ಶ್ರೀ ಎಸ್. ಅಂಗಾರ : ಆ ಜಮೀನಿನ ಕೇವಲ 10 ಸೆಂಟ್‌ಗೆ ಮಾತ್ರ ವಿವಾದ ಇದೆ. ಬಾಕಿಯದಕ್ಕೆ ವಿವಾದ ಇಲ್ಲ. ಸರ್ಕಾರದ ಅಧಿಕಾರಿಗಳಿಂದ ವಿಳಂಬವಾಗಿರುವುದು.

ಅಧ್ಯಕ್ಷರು : ಆ 10 ಸೆಂಟ್ ಜಾಗ ಮಧ್ಯದಲ್ಲಿ ಬರುವುದೇ ಅಥವಾ ಅಂಚಿಗೆ ಬರುವುದೇ?

ಶ್ರೀ ಎಸ್. ಅಂಗಾರ : ಅಂಚಿಗೆ ಬರುತ್ತದೆ.

ಅಧ್ಯಕ್ಷರು :ಹಾಗಾದರೆ ಸಚಿವರೇ ಬಸ್‌ಸ್ಟ್ಯಾಂಡ್ ಕೆಲಸ ಶುರುಮಾಡಿಸಿ

ಶ್ರೀ ಕೆ.ಎಸ್. ಬೀಳಗಿ : 24 ಗುಂಟೆಯಲ್ಲಿ 8 ಗುಂಟೆ ಹೋದರೆ 16 ಗುಂಟೆಯಲ್ಲಿ ಬಸ್‌ಸ್ಟ್ಯಾಂಡ್ ಕಟ್ಟುವುದು ಹೇಗೆ ಸ್ವಾಮಿ?

ಅಧ್ಯಕ್ಷರು : ಅಂಗಾರ ಅವರೆ, ಉಳಿಕೆ ಜಾಗದಲ್ಲಿ ಬಸ್‌ಸ್ಟ್ಯಾಂಡ್ ಕಟ್ಟಲು ಆಗುವುದಾದರೆ, you can sit with the Minister and discuss. ಚರ್ಚೆ ಮಾಡಿ, ಅನಂತರ ಮಂತ್ರಿಗಳನ್ನು ಭೇಟಿಯಾಗಿ. ನಿಮ್ಮ ಅಧಿಕಾರಿಗಳನ್ನೂ ಕರೆಯಿಸಿ. Minister may see that the Hon'ble Member is an young man and he comes from a

reserved constituency. You have the responsibility to take special care of youngsters.

ಶ್ರೀ ಬಿ.ಬಿ.ಶಿವಣ್ಣ : ಮಾನ್ಯ ಅಧ್ಯಕ್ಷರೇ ಗುಂಟೆಗೂ ಸೆಂಟ್‌ಗೂ ವ್ಯತ್ಯಾಸ ಇದೆ. ಕೊಡಗು ದಕ್ಷಿಣ ಕನ್ನಡದಲ್ಲಿ 100 ಸೆಂಟ್ಸ್‌ಗೆ ಒಂದು ಎಕರೆ ಬೇರೆ ಕಡೆ 40 ಗುಂಟೆಗೆ ಒಂದು ಎಕರೆ.

ಶ್ರೀ ಕೆ.ಎಸ್. ಬೀಳಗಿ : ಅದನ್ನೇ ನಾನು ಹೇಳುತ್ತಿರುವುದು 0.60 ಸ್ವಾಧೀನತೆಗೆಂದು ಹಾಕಿದ್ದಾರೆ. ಅದಕ್ಕೆ ದುಡ್ಡೂ ತುಂಬಿದ್ದೇವೆ ನಾವು 0.20ಗೆ ಮಾಲಿಕರು ಹೈಕೋರ್ಟಿನಲ್ಲಿ ಸ್ಟೇ ತಂದಿದ್ದಾರೆ. ಉಳಿದಿದ್ದರಲ್ಲಿ ಮಾಡುವುದಕ್ಕೆ ಪ್ರಾಬ್ಲಂ ಇದೆ ಎಂದು ಹೇಳಿದೆ ಅಷ್ಟೆ.

ರಾಜ್ಯದ ಪ್ರತಿ ಗ್ರಾಮಗಳಲ್ಲಿ ಗೋಮಾಳ ಜಮೀನು

274 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರತಿ ಹಳ್ಳಿಗಳಲ್ಲೂ ಗೋಮಾಳ ಉಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಗೋಮಾಳವು ಸೇರಿದಂತೆ ಸರ್ಕಾರಿ ಭೂಮಿ ರಾಜ್ಯದ್ಯಂತ ಎಷ್ಟು ಒತ್ತುವರಿಯಾಗಿದೆ? (ಜಿಲ್ಲೆ ಹಾಗೂ ತಾಲ್ಲೂಕುವಾರು ವಿವರ ಒದಗಿಸುವುದು).

ಶ್ರೀ ಆರ್.ಎಲ್. ಜಾಲಪ್ಪ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಕಂದಾಯ ಕಾಯಿದೆ 1964 ಕ್ಕೆ ತಿದ್ದುಪಡಿಯನ್ನು ಮಾಡಿ ಕಲಂ 94 ಎ ಇದನ್ನು ಹೊಸದಾಗಿ ಸೇರಿಸಿ ಗೋಮಾಳ ಮುಂತಾದ ಸರ್ಕಾರಿ ಜಮೀನುಗಳಲ್ಲಿ ಕೃಷಿ ಉದ್ದೇಶಕ್ಕಾಗಿ ಆಗಿರುವ ಒತ್ತುವರಿಯನ್ನು ಸಕ್ರಮಗೊಳಿಸುವ ಯೋಜನೆಯು ಸೆಪ್ಟಂಬರ್ 1991 ರಿಂದ ಜಾರಿಗೆ ಬಂದಿದ್ದು, ದಿನಾಂಕ 14.4.90ರ ಹಿಂದೆ ಗೋಮಾಳ ಜಮೀನುಗಳಲ್ಲಿ ಆಗಿರುವ ಒತ್ತುವರಿಗಳನ್ನು (ಸಾರ್ವಜನಿಕ ಉದ್ದೇಶಕ್ಕಾಗಿ ಕಾದಿರಿಸಿರುವ ಜಮೀನುಗಳಾದ ಕೆರೆ ಅಂಗಳ, ಗುಂಡುತೋಪು ಇತ್ಯಾದಿಗಳನ್ನು ಹೊರತುಪಡಿಸಿ) ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಮತ್ತು ದಿನಾಂಕ 14.4.90ರ ನಂತರ ಗೋಮಾಳ ಮತ್ತು ಇತರ ಸರ್ಕಾರಿ ಜಮೀನುಗಳಲ್ಲಿ ಆಗಿರುವ ಅತಿಕ್ರಮಣಗಳನ್ನು ತೆಗೆದುಹಾಕಲು ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ಆ) 25, 80, 214 ಎಕರೆಗಳು

(ಜಿಲ್ಲಾವಾರು ಮಾಹಿತಿ ಅನುಬಂಧದಲ್ಲಿ ನೀಡಲಾಗಿದೆ. ತಾಲ್ಲೂಕುವಾರು ಮಾಹಿತಿ ಲಭ್ಯವಿಲ್ಲ).

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಸಚಿವರು ಗೋಮಾಳವು ಸೇರಿದಂತೆ ಸರ್ಕಾರಿ ಭೂಮಿ ರಾಜ್ಯಾದ್ಯಂತ ಒತ್ತುವರಿಯಾಗಿರುವುದು 25,80,214 ಎಕರೆ. ಎಂದು ಹೇಳಿದ್ದಾರೆ, ಇಷ್ಟು ದೊಡ್ಡ ಪ್ರಮಾಣದಲ್ಲಿ ನಿಜವಾಗಿಯೂ ಸಾರ್ವಜನಿಕವಾಗಿ ಉಪಯೋಗವಾಗುವುದೆಯೋ, ಯಾವುದನ್ನು ಅಕ್ರಮವಾಗಿ ಒತ್ತುವರಿ ಮಾಡಿದ್ದಾರೆ ಇದನ್ನು ಎಷ್ಟು ಬೇಗ ಬಿಡಿಸುವುದಕ್ಕೆ ಸರ್ಕಾರ ಕ್ರಮ ಕೈಗೊಂಡಿದೆ? ನಿಮ್ಮ ಬಗ್ಗೆ ನನಗೆ ಬಹಳ ಗೌರವ ಇದೆ, ಬಹಳ ದಕ್ಷತೆಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತೀದ್ದೀರಿ. ಆದರೆ ಇಷ್ಟೊಂದು ಲಕ್ಷ ಎಕರೆಯನ್ನು ಬಹಿರಂಗವಾಗಿ ಒತ್ತುವರಿ ಮಾಡಿ ಕೊಂಡಿರುವಾಗ ಇದನ್ನು ಯಾವಾಗ ಬಿಡಿಸುತ್ತೀರಿ? ಈ ಭೂಮಿಗಳು